

## ಪುಳಚಾರು ಅಲ್ಲ ಪಲ್ಸಾರ್

ಅಡುಗೆ ಭಟ್ಟ ಸೀನನಿಗೆ ಬೈಕ್ ಕೊಳ್ಳುವ ಆಸೆ ಬಂತು. ಅದಕ್ಕಾಗಿ ಸಾಲ ಪಡೆಯಲು ಬ್ಯಾಂಕಿಗೆ ಹೋಗಿ ಮ್ಯಾನೇಜರ್ ಅವರನ್ನು ಭೇಟಿ ಮಾಡಿ ವಿಚಾರ ತಿಳಿಸಿದ.

ಮ್ಯಾನೇಜರ್: ಭಟ್ರೇ...ಯಾವ ಬೈಕ್ ಖರೀದಿ ಪ್ಲ್ಯಾನ್ ಮಾಡಿದಿರಿ?

ಸೀನ: ತುಂಬಾ ಚೆನ್ನಾಗಿರುವ ಒಳ್ಳೆಯ ಬೈಕ್ ತಗೋಬೇಕು ಅಂತಿದ್ದೀನಿ ಸರ್.

ಮ್ಯಾನೇಜರ್: ಯಾವ ಕಂಪನಿ ಬೈಕು, ಎಷ್ಟು ಬೆಲೆ?

ಸೀನ: ಅದೇ ಸಾರ್, ಹೊಸದಾಗಿ ಬಂದಿದೆಯಲ್ಲ 'ಪುಳಚಾರು'. ಅದು ಸೂಪರ್ ಆಗಿದೆಯಂತೆ! ಅದನ್ನೇ ತಗೋತೀನಿ.

ಮ್ಯಾನೇಜರ್: (ಪುಳಚಾರು ಬೈಕ್ ಯಾವುದೆಂದು ಅರ್ಥವಾಗದೆ ಸಾಲ ವಿಭಾಗದ ಆಫೀಸರ್‌ರನ್ನು ಕರೆದು ವಿಚಾರಿಸಿ ತಿಳಿದುಕೊಂಡರು) ರೀ ಭಟ್ರೇ, ಅದು ಪುಳಚಾರು ಅಲ್ಲಾ. ಪಲ್ಸಾರ್ ಬೈಕ್. ಬಜಾಜ್ ಕಂಪನಿಯದ್ದು.

ಸೀನ: ಅದೇ ಅದೇ ಅದನ್ನೇ ಸಾರ್ ನಾನೂ ಹೇಳಿದ್ದು. ನಾನು ಅಡುಗೆ ಭಟ್ಟ ಅಲ್ವಾ?

***

## ಸೈಕಲ್‌ಗೆ ಸಾಲ ಕೊಡಿ

ಗುಂಡ: ನನ್ನ ಹಳೆಯ ಸೈಕಲ್ ಮೇಲೆ ಸಾಲ ನೀಡಿ.

ಬ್ಯಾಂಕ್ ಮ್ಯಾನೇಜರ್: ಸಾಲ ಖಂಡಿತ ಕೊಡ್ತೇನೆ. ಆದರೆ ಹಳೆಯ 500 ಮತ್ತು 1000 ಮುಖಬೆಲೆಯ ನೋಟು ಮಾತ್ರ!



## ಅಪ್ಪ ಮನೆಯಲ್ಲೇ ಯಾಕಿದ್ದಾರೆ?

ಸೀನಪ್ಪ ಯಾವಾಗಲೂ ಮನೆಯಲ್ಲಿಯೇ ಇರೋದನ್ನು ಕಂಡು ಆತನ ಮಗ ಪುಟ್ಟ ಅಮ್ಮನನ್ನು ಕೇಳಿದ....

ಪುಟ್ಟ: ಅಮ್ಮಾ...ಅಮ್ಮಾ...ಈಚೆಗೆ ಯಾಕೆ ಅಪ್ಪ ಯಾವಾಗಲೂ ರೂಮಲ್ಲೇ ಇರ್ತಾರೆ?

ಅಮ್ಮ: ಹೊರಗೆ ಹೋದರೆ ಪೊಲೀಸಿನವರ ಕಾಟ.

ಪುಟ್ಟ: ಹಾಗಿದ್ದರೆ ಅಪ್ಪಾನೂ ನಮ್ ಜೊತೆ ಹಾಲ್‌ನಲ್ಲೇ ಕೂರಬಹುದಲ್ಲ?

ಅಮ್ಮ: ಇಲ್ಲಿ ನಾನಿದ್ದೀನಲ್ಲ ಪುಟ್ಟ!

ಗುಂಡ: ಓಹ್, ಆಗಬಹುದು ಯಾವ ನೋಟುಗಳನ್ನಾದರೂ ಕೊಡಿ. ಒಟ್ಟಿನಲ್ಲಿ ಸಾಲ ಕೊಡಿ ಹೆಂಡ್ತಿಗೆ ಸೀರೆ ಕೊಡಿಸಬೇಕು!

***

## ಕಸ ಗುಡಿಸಿ ಪ್ಲೀಸ್

'ರೀ! ಕಸ ಗುಡಿಸ್ತೀರಾ ಪ್ಲೀಸ್' (ಹೆಂಡತಿಗೆ ಏನಾದರೂ ಕೆಲಸ ಆಗಬೇಕಾದಾಗಿನ ಭಾಷೆ) 'ಕಸ ಗುಡಿಸ್ತೀರೋ ಇಲ್ವೊ' (ಇದು ಕೊರೊನಾ–ಲಾಕ್‌ಡೌನ್ ಸಮಯದಲ್ಲಿನ ಧಾಟಿ)

***

## ಅರ್ಜೆಂಟ್ ಬೇಡ

ಲಾಕ್‌ಡೌನ್ ಸಮಯದಲ್ಲಿ ಮನೆಯಲ್ಲಿಯೇ ಕುಳಿತ ಗಂಡ ದೇವರಲ್ಲಿ ಕೇಳಿದ್ದು.... 'ಇನ್ನು ಎಷ್ಟು ದಿನಾ ಭಗವಂತ ...ಈ ಶಿಕ್ಷೆ?' ಅದಕ್ಕೆ ಅಡುಗೆ ಮನೆಯಲ್ಲಿದ್ದ ಹೆಂಡತಿ ಟೀವಿ. ಮುಂದೆ ನಿಂತು, ನೀಡಿದ ಉತ್ತರ..... 'ಮೋದಿ ಜಿ... ಅರ್ಜೆಂಟ್ ಮಾಡ್ಬೋ ಬೇಡಿ.....ದೇಶ ಮುಖ್ಯ'!

***

ಗುಂಡ: ತಲೆಗೆ ಅಷ್ಟೊಂದು ಗಾಯ ಹೇಗಾಯ್ತು?

ಗೌಡ: ಹೆಂಡತಿ ಹೊಡೆದಳು.

ಗುಂಡ: ಯಾಕೆ?.

ಗೌಡ ಅವಳು ಅಪ್ಪ ಅಮ್ಮ ಬಂದಿದ್ದರು. ಹೊರಗೆ ಹೋಗಿ ಏನಾದ್ರೂ ತನ್ನಿ ಎಂದಳು. ನಾನು ಹೋಗಿ ಆಟೊ ತಂದೆ ಅಷ್ಟೇ.

***

## ಒಳ್ಳೇದಲ್ವ?

ಈತ: ಕೊರೊನಾಕ್ಕೆ ಥ್ಯಾಂಕ್ಸ್ ಹೇಳ್ಬೇಕು ಮಾರಾಯ.

ಆತ: ಯಾಕೆ ಪರೀಕ್ಷೆ ಮುಂದಕ್ಕೆ ಹೋದ್ವಲ್ಲ.

ಈತ: ನಾನು ಓದಿರಲೇ ಇಲ್ಲ.

ಈತ: ಅದೇನು ಬಿಡು. ಪರೀಕ್ಷೆ ರದ್ದಾದ್ರೆ ಇನ್ನೂ ಒಳ್ಳೇದಲ್ವ? ಆಗ ಹೇಳೋಣವಂತೆ.

***

## ಜ್ಞಾನಿ

ಅಳಿಯ, ಅತ್ತೆ, ಆತನ ಹೆಂಡತಿ ಗುರುಗಳ ಪ್ರವಚನ ಕೇಳಲು ಹೋಗಿದ್ದರು. ಸ್ವರ್ಗಕ್ಕೆ ಹೋಗಲು ಇಚ್ಛಿಸುವವರು ತಮ್ಮ ಕೈಗಳನ್ನು ಮೇಲೆತ್ತಿ ಎಂದರು ಗುರುಗಳು. ಅತ್ತೆ, ಹೆಂಡತಿ ಕೈ ಎತ್ತಿದರು. ಆದ್ರೆ ಅಳಿಯ ಮಾತ್ರ ಕೈ ಎತ್ತಲಿಲ್ಲ. ಗುರು, ನೀನು ಸ್ವರ್ಗಕ್ಕೆ ಹೋಗುವುದಿಲ್ಲವೇ? ಎಂದರು. ಅಳಿಯ, ಇವರಿಬ್ಬರೂ ಹೋದ್ರೆ ನನಗಿಲ್ಲೇ ಸ್ವರ್ಗ ಎಂದ! ಚಕಿತರಾದ ಗುರುಗಳು, ಶಿಷ್ಯರೇ ಈ ಜ್ಞಾನಿಯನ್ನು ಆಶ್ರಮಕ್ಕೆ ಸೇರಿಸಿಕೊಳ್ಳಿ ಎಂದರು.

(ಸಂಗ್ರಹ) ರಾಜೀವ್ ಎನ್. ಮಾಗಲ್,
ಹಾಸನ


